ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಆಳಂದ ತಾಲ್ಲೂಕಿನಲ್ಲಿ ೧೯೮೪-೮೫ ರಿಂದ ೩೧-೧-೮೬ರ ವರೆಗೆ ೪೨೫ ಜನ ಅಂಗವಿಕಲರಿಗೆ ೨,೮೨೩ ವಿಧವೆಯರಿಗೆ ಮತ್ತು ೯೯೫ ವೃದ್ಧಾಪ್ಯ ವೇತನದಾರರಿಗೆ ಮಾಸಾಶನವನ್ನು ಮಂಜೂರು ಮಾಡಲಾಗಿದೆ.

ಆ) ಅಂಗವಿಕಲ ಮಾಸಾಶನದ ಬಗ್ಗೆ ೨ ಅರ್ಜಿಗಳು ಮತ್ತು ವೃದ್ಧಾಪ್ಯ ವೇತನದ ಬಗ್ಗೆ ೩ ಅರ್ಜಿಗಳ ಮೇಲೆ ಕ್ರಮ ಕೈಗೊಳ್ಳಬೇಕಾಗಿದೆ. ವಿಧವಾ ವೇತನದಲ್ಲಿ ಯಾವುದೇ ಅರ್ಜಿಗಳ ಮೇಲೆ ಕ್ರಮ ಕೈ ಗೊಳ್ಳಬೇಕಾಗಿಲ್ಲ.

ಇ) ಸಂಬಂಧಪಟ್ಟ ಮಾಹಿತಿಯನ್ನು ಅರ್ಜಿದಾರರು ಸಲ್ಲಿಸದ ಕಾರಣ ಈ ಅರ್ಜಿಗಳನ್ನು ಇತ್ಯರ್ಥ ಗೊಳಿಸಿಲ್ಲ.

ದಾವಣಗೆರೆಯಲ್ಲಿ ರೈಲು ಸಂಚಾರ ಪ್ರದೇಶದಲ್ಲಿ ಸೇತುವೆ ಕೆಳಗೆ ಭೂಗತ ರಸ್ತೆ ಮಾಡುವುದು

೧೨೯೪. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಲೋಕೋಪಯೋಗಿ, ಜಲಾನಯನ, ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆ ನಗರದ ಮಧ್ಯದಲ್ಲಿ ರೈಲ್ವೆ ಸಂಚಾರದಿಂದ ನಗರದ ಜನರಿಗೆ ಆಗುತ್ತಿರುವ ತೊಂದರೆ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜನ ಸಂಚಾರಕ್ಕೆ ಭೂಗತ ರಸ್ತೆ ನಿರ್ಮಾಣ ಮಾಡಲು ಸರ್ಕಾರದವರಿಂದ ಕ್ರಮ ಕೈಕೊಳ್ಳುವರೆ ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ದಾವಣಗೆರೆ ನಗರ ಮಧ್ಯದಲ್ಲಿರುವ ರೈಲ್ವೆಗೇಟನ್ನು ರೈಲು ಸಂಚಾರದ ಸಮಯದಲ್ಲಿ ಮುಚ್ಚುವುದರಿಂದ ವಾಹನ ಸಂಚಾರ ಸ್ಥಗಿತಗೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಸ್ತೆಯ ಇಕ್ಕೆಲಗಳಲ್ಲಿ ಅನೇಕ ವ್ಯಾಪಾರೀ ಕಟ್ಟಡಗಳು ಇದ್ದು ರಸ್ತೆಯ ಅಂತರ ಕಮ್ಮಿ ಇರುವುದರಿಂದ ಈ ಜಾಗದಲ್ಲಿ ಭೂಗತ ರಸ್ತೆ ಮಾಡುವುದು ಅನೇಕ ಸಮಸ್ಯೆಗಳನ್ನು ಒಳಗೊಂಡಿದೆ. ಇದರ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು.

ಭದ್ರಾ ಮೇಲ್ದಂಡೆ ಯೋಜನೆ

೧೦೯೪. ಶ್ರೀ ಜಿ ರಾಮದಾಸ್ (ಹೊಸದುರ್ಗ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದವರು ಭದ್ರಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತಗೊಳಿಸಲು ಇದುವರೆಗೆ ಕೈಗೊಂಡಿರುವ ಕ್ರಮಗಳೇನು ?

ಆ) ಈ ಯೋಜನೆಯ ಅನುಷ್ಠಾನದ ಮೊದಲ ಹಂತದ ದಾಖಲಾತಿಗಳ ಸಿದ್ಧತೆ ಸರ್ವೇ ಹಾಗೂ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ.

ಇ) ಈ ಯೋಜನೆಯಿಂದ ಎಷ್ಟು ಎಕರೆ ಜಮೀನಿಗೆ ನೀರಿನ ಸೌಲಭ್ಯ ದೊರೆಯುವುದು, ಹಾಗೂ ಎಷ್ಟು ತಾಲ್ಲೂಕಿಗೆ ವಿಸ್ತರಿಸಲಾಗುವುದು. ಇದಕ್ಕಾಗಿ ಪೆಚ್ಚವಾಗಬಹುದಾದ ಹಣದ ಅಂದಾಜೆಷ್ಟು?

ಈ) ಈ ಕಾರ್ಯ ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ.?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಂದ ಈ) ಈ ಯೋಜನೆಯು ಇನ್ನೂ ಅನ್ವೇಷಣಾ ಹಂತದಲ್ಲಿದೆ. ಅನ್ವೇಷಣೆ ಮುಗಿದ ನಂತರ ವಿವರಗಳು ದೊರೆಯುತ್ತದೆ.